d. No. M. 1299 || ಸತ್ಯಾನ್ನಾಸ್ತಿ ಪರೋಧರ್ಮಃ || 16-4 ಬಿಡಿ ಪ್ರತಿ ೩ ಕ

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—

ಸಂಪುಟ ೭] ಮೈಸೂರು, ಮಂಗಳವಾರ, ೨೮ನೆ ಜುಲೈ ೧೯೨೫. [ಸಂಚಿಕೆ ೩

ಕಲಾಮಂದಿರಂ, ಬೆಂಗಳೂರು ಸಿಟಿ

ಕಲಾಭ್ಯಾಸ

ಒಂದು ವರ್ಷದಲ್ಲಿ ಸ್ವತಂತ್ರವಾಗಿ ಜೀವನಮಾಡಲು ಸಮರ್ಥರಾಗುವಿರಿ.

ವಿದ್ಯಾರ್ಥಿ ವೇತನ ೩ ರಿಂದ ೭ ರೂಪಾಯಿನವರಿಗೆ

೧ ಇದೇ ಜುಲೈ ೧ ನೆ ತಾರೀಖಿನಿಂದ ಒಂದು ವರ್ಷ ಕಾಲ

೨ ವಿದ್ಯಾರ್ಥಿಗಳು ೧೩ ವರ್ಷಕ್ಕೆ ಮೇಲ್ಪಟ್ಟ ೨೫ ರ ವಳಗೆ ಇರತಕ್ಕದ್ದು ಮತ್ತು ಕನ್ನಡ ೩ ನೇ ತರಗತಿಯವರಿಗಾದರೂ ವ್ಯಾಸಂಗಮಾಡಿರತಕ್ಕದ್ದು.

೩ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಮೈಸೂರು, ಬೆಂಗಳೂರು ಪಟ್ಟಣಗಳಿಂದಲೂ ಇಬ್ಬಿಬ್ಬರನ್ನು ಆರಿಸಿಕೊಳ್ಳುವೆವು

೪ ಪ್ರತಿ ವಿದ್ಯಾರ್ಥಿಯೂ ಪ್ರಾರಂಭದಲ್ಲಿ ೫೦ ರೂಪಾಯಿಗಳನ್ನು ಕೊಡತಕ್ಕದ್ದು

— ಬೋಧಿಸುವ ಅಂಶಗಳು —

೧ ಡ್ರಾಯಿಂಗ್, ಪೆಯಿಂಟಿಂಗ್, ಸ್ಕೆಚ್ಚಿಂಗ್.

೨ ಬೋರ್ಡು ಬರೆಯುವದು, ಸ್ಕ್ರೀನುಗಳನ್ನು ಬರೆಯುವುದು.

೩ ಮನೆಗಳಿಗೆ ಬಣ್ಣವನ್ನು ಹಾಕುವದು. ಮತ್ತು ಅಲಂಕಾರಮಾಡುವುದು.

೫ ಫೋಟೋ ತೆಗೆಯುವದು. ಎನ್ಲಾರ್ಜ್ ಮಾಡುವುದು

೬ ಹತ್ತಿಯನ್ನು ಸಿದ್ಧಮಾಡಿಕೊಂಡು ನೂಲುವುದು,

ಮುಂತಾದ ಇನ್ನೂ ಅನೇಕ ಕೈಕಸಬನ್ನೂ ಕಲಿಸಿಕೊಡುವೆವು.

ಎ. ಎನ್. ಸುಬ್ಬರಾವ್
ಆರ್ಟಿಸ್ಟ್

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕೊಳ್ಳಬೇಕಾಗಿ ಪ್ರಾರ್ಥನೆ. [22-5]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್,
ಸುಗಂಧಕಾರಿಗಳು, ಮೈಸೂರು

ಹೊಸಮಾದರಿಯ 'ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೭೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಚ್ಚಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು,

Rosehead Necklaces

ಮುತ್ತಿನ ಕಂಠೀಹಾರಗಳು

ಈ ಮುತ್ತುಗಳು ಚೆನ್ನಾಗಿ ಹೊಳಪುಳ್ಳವುಗಳಾಗಿವೆ. ನೋಡಲು ಅತಿ ಸುಂದರವಾಗಿವೆ. ಇವನ್ನು ನಿಜವಾದ ಅಥವ ಇಮಿಟೇಷನ್ ಮುತ್ತುಗಳೊಡನೆ ಹೋಲಿಸಿ ನೋಡಿ, ಒಳ್ಳೇ ಮುತ್ತುಗಳಿಗಿಂತ ಕೀಳೆಂದು ತೋರಿದರೂ, ಇಮಿಟೇಷನ್ ಮುತ್ತುಗಳಿಗಿಂತ ಉತ್ತಮವಲ್ಲವೆಂದು ತೋರಿದರೂ ೮ ದಿನಗಳೊಳಗೆ ವಾಪ್ಸು ಮಾಡದಲ್ಲಿ ನಿಮ್ಮ ಹಣ ವಾಪ್ಸುಮಾಡಲಾಗುವುದು ಚಿನ್ನದ ಕೊಂಡಿಗಳಿಂದ ಸೇರಿಸಿರುವ ೧೮ ಅಂಗುಲದ ಈಹಾರವನ್ನು ವಿ. ಪಿ. ಮೂಲ್ಕ ೮ ರೂಪಾಯಿಗಳಿಗೆ ಸರವನ್ನಿಡಲು ಒಂದು ಅಂದವಾದ ಪೆಟ್ಟಿಗೆಯನ್ನು ಉಚಿತವಾಗಿ ಕೊಡಲಾಗುತ್ತೆ. ಕೆಲವು ಮಾತ್ರ ಮಿಕ್ಕಿವೆ ಅನೇಕ ಮಾದರಿಯಲ್ಲಿಯೂ ವಿವಿಧ ಬಣ್ಣದ್ದಾಗಲಿ, ಸುವಾಸಿದವಾಗಿಯೂ ಇದೆ. ಕಗ್ಗತ್ತಲೆಯಲ್ಲಿಯೂ ಹೊಳೆಯುತ್ತದೆ. ಒಡವೆ ಜೊತೆಗೆ ಒಂದು ದೀಪವೂ ಮೊದಲು ಒಂದು ವಾರದಲ್ಲೇ ೨೨೦೦ ಕ್ಕೆ ಮೇಲ್ಪಟ್ಟು ಖರ್ಚಾಗಿದೆ. 14-7

'ಅಪ್ಪೊ' ಅಲ್ಯೂಮಿನಿಯಂ ಸೋಪ'

ಯೂರೋಪಿನ ಒಂದುದೊಡ್ಡ ಕಾರ್ಖಾನೆಯಲ್ಲಿ ತಯಾರಾದ ಈಸಾಬೂನುಗಳು ಕೊಳೆಯಾಡ ಅಲೂಮಿನಂ ಪಾತ್ರೆಗಳನ್ನು ತೊಳೆದು ಹೊಳೆಯುವಂತೆ ಮಾಡುತ್ತದೆ. ಒಂದು ಪೆಟ್ಟಿಗೆಯು ೧೦೦ ಪಾತ್ರೆಗಳನ್ನು ತೊಳೆಯಲು ಬರುತ್ತೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ.

ಕ್ರಯ ದೊಡ್ಡ ಪೆಟ್ಟಿಗೆ ೧ಕ್ಕೆ ರೂ ೧—೪—೦
ಚಿಕ್ಕ ಪೆಟ್ಟಿಗೆ ೧ಕ್ಕೆ ರೂ ೦—೧೦—೦

ಸೋಪಿಗೆ ಆರ್ಡರ್ ಕೊಡುವವರು ಪೂರ್ತಾ ಹಣವನ್ನು ಮುಂಗಡವಾಗಿ ರವಾನಿಸಬೇಕು.

Agencia Mercantil-y-Maritima,
INTERNATIONAL BUILDINGS,
LUDHIANA (Punjab)

Never too late to mend

The past, present and future Dictator

The wonderful mechanism of man he explained. Your future once more, wh that beginning, wherefore this rise and f the what of the next DO CONSULT. Th astrologer determines all about your li before the curtain drops. The all is th research study of that beginning, the indu tive and unique advisory of the rise and f in current life, the what in future. This combined in the knowledge—mature of th birth-time, the Zodaic sign commanding th planets, the constellation of star that ligh the right way of life's attainment. Opp tunity solicited with a hearty offer of tr Beware others of this proclamation are read in the agreement of life with its vi and invisible imbeded directors. Man in pride of presumption has neglected to ma tain his own life concurrently with the inv sible and visible agencies, hence, the frustra tions of his attempts to success. Success i only gained by man, the man that know equally of the visible impediments which h wards easily and the invisible which he tri to attain but neglects. Fail not, neglect n and attain your wishes as the free-will ma The win's influences are imbeded in tin The doctor advises only to the outer agr ment but the honest way is lacking to plain the why of the failure. The astrol alone can explain this in its detail and you the life's battle as easy as the doc medicine, which proclaims to relieve. foreword might appeal and lead you to c Astralogical Bureau, where your all-care explained to heart's content. The hear the seat of divinity, the divine-wisdom is broken to your swallowing adversitie bits.

Apply for the yearly, monthly, and daily predictions; particulars on

Bidare Nanjundasastry and Bro.
Astrologers, PARIMALA VILA
Myso

" ಸತ್ಯವಾದಿ "

೨೮ ನೆ ಜುಲೈ ೧೯೨೫

ಚಂದ್ರಗ್ರಹಣ

ಚಂದ್ರಗ್ರಹಣವು ೪—೮—೨೫ ರಲ್ಲಿ ಸಂಭವಿಸುವುದು ಸರಿಯಷ್ಟೆ. ದೃಶ್ಯಾದೃಶ್ಯದ ವಿಚಾರದಲ್ಲಿ ಜೋಯಿಸರಲ್ಲಿ ಭಿನ್ನಾಭಿಪ್ರಾಯ ಹುಟ್ಟಿ ಪತ್ರಿಕಾ [illegible] ತಮ್ಮ ಪತ್ರಿಕೆಗಳಿಗೆ ಸಂಪೂರ್ಣ ಗ್ರಾಸವು ಒದಗಿರುತ್ತದೆಯೇ ಹೊರತು ಜನಗಳ ಅನುಮಾನ ಪರಿಚ್ಛೇದ ಮಾತ್ರ ಆಗಲಿಲ್ಲ. ಗ್ರಹಣದ ವಿಷಯದಲ್ಲಿ ಆಚಂದ್ರಾರ್ಕವಾಗಿ ಒಂದು ಮಾದರಿ ಆಂತರಿಕ ಮೂಢಭಕ್ತಿಯನ್ನು ಪೂರ್ವಿಕರು ಪುರಾಣಕಥೆಗಳಿಂದ ಉಂಟುಮಾಡಿ ಇಂತಹ ಲೋಕೋಪಕಾರಿಗಳಾದ ಸೂರ್ಯಚಂದ್ರಾದಿಗಳಿಗೆ ರಾಹು ಕೇತು ಎಂಬ ರಾಕ್ಷಸರ ಕಾಟಗಳನ್ನು ಹೋಗಲಾಡಿಸುವುದಕ್ಕಾಗಿಯೂ ಪಿತೃಗಳ ಕ್ಷೇಮಕ್ಕಾಗಿಯೂ ಜನಗಳು ಗ್ರಹಣಕಾಲದಲ್ಲಿ ಅನಿಷ್ಟನಿವಾರಣಾರ್ಥವಾಗಿ ತಿಲತರ್ಪಣಾದಿಗಳನ್ನು ಮತಾಚಾರರೀತ್ಯಾ ಮಾಡಿ ಲೋಕಕ್ಕೆ ಕ್ಷೇಮವನ್ನುಂಟುಮಾಡಬೇಕೆಂದು ಉಪದೇಶಿಸಿ ಆ ಮೂಲಕ ದೈವಭಕ್ತಿ ಪಿತೃಭಕ್ತಿಯನ್ನು ಹೆಚ್ಚಿಸಿದ್ದರು. ಆದರೆ ಕಲಿಕಾಲ ಮುಂದರಿದಹಾಗೆಲ್ಲ ಬುದ್ಧಿಕುಶಲತೆಯೂ ವಿಪರೀತವಾಗುತ್ತಾ ಬಂದಿದೆ. ಪಾಶ್ಚಾತ್ಯ ವಿದ್ಯಾಪ್ರೌಢಿಮೆಯು ನವನಾಗರಿಕರಲ್ಲಿ ನೆಲಸಿ ಶಾಸ್ತ್ರಶೋಧನೆಯಿಂದ ಗ್ರಹಣದ ನಿಜಾಂಶವನ್ನು ಪ್ರಚುರಪಡಿಸಿ ಜನರ ಮೂಢಭಕ್ತಿಯನ್ನು ತೊಲಗಿಸಿತು. ನಮ್ಮ ಜ್ಯೋತಿಷ ವಿದ್ವಾಂಸರು ತಮ್ಮ ಭಿನ್ನಾಭಿಪ್ರಾಯ ಳನ್ನು ಪ್ರಚುರಪಡಿಸುವುದರ ಮೂಲಕ ಜನರಲ್ಲಿ ನುಮಾನವನ್ನಂಕುರಾರ್ಪಣ ಮಾಡಿದರು. ಜನರಿಗೆ ನವನಾಗರಿಕ ಜ್ಞಾನೋದಯದಿಂದ ಮೂಢಭಕ್ತಿ ತೊಲಗಿ ಗ್ರಹಣದ ನಿಜಾಂಶದಲ್ಲಿ ವ್ಯತ್ಯಸ್ತವಾದಭಿಪ್ರಾಯಗಳನ್ನು ಕಂಡು ಅವರು ನಾಸ್ತಿಕರಾಗಲೂ ಕಾರಣವಾಯಿತು. ಜನಸಮುದಾಯದಲ್ಲಿ ನಂಬಿಕೆಯನ್ನುಂಟುಮಾಡುವ ಶಕ್ತಿಯಿದ್ದರೇನೇ ಅಂತಹ ವಿದ್ವಾಂಸರು ರಂಗಕ್ಕೆ ಬಂದು ನಿಂತು ತಮ್ಮ ಉಪದೇಶದಿಂದ ಸಮಾಧಾನಗೊಳಿಸುವುದು ಸಮಂಜಸವಾ ಕಾಣುತ್ತದೆ. ಈ ಗ್ರಹಣದ ವಿಷಯದಲ್ಲಿ ಸದ್ಯ ರೀತಿ ಭಿನ್ನಾಭಿಪ್ರಾಯಗಳು ಹುಟ್ಟಿ "ನೋಡಿ ಹೊರತು ನಂಬಲಾಗದು" ಎಂಬ ವಾಕ್ಯಿನಂತಾಗಿ ತ್ತೆ. ಕೆಲವು ಜೋಯಿಸರು ಗ್ರಹಣ ದೃಶ್ಯವೆಂ ಊ ಕೆಲವರು ಅದೃಶ್ಯವೆಂತಲೂ ಮತ್ತೆ ಕೆಲವರು ಶಾಸ್ತ್ರತಃ ದೃಶ್ಯವೆಂತಲೂ ಹೇಳಿದ ಮಾತ್ರಕ್ಕೇನೆ ನರಿಗೇನುಪಯೋಗವಾಯಿತು ? ಇವೆಲ್ಲಾ ಸಮಾ ನಕರವಲ್ಲವೆಂದು ತಿಳಿದು ಒಬ್ಬ ಜೋಯಿಸರು ಭಿಪ್ರಾಯವನ್ನು ಹೊರಪಡಿಸಿದರೂ "ಲೋ ನ್ನರುಚಿಃ" ಎಂಬಂತೆ ನಡೆಯುತ್ತದೆಂದು ರೆ. ಇದೆಷ್ಟರಮಟ್ಟಿನ ಪ್ರೌಢಿಮೆಯು ! ರ ಇಷ್ಟದಂತೆ ನಡೆದುಕೊಳ್ಳಬೇಕಾದರೆ ಪಂ ಗವೇಕೆ ? ಶಾಸ್ತ್ರವೇಕೆ ? ಜೋಯಿಸರೇಕೆ ? ಸಿ ಪ್ರಕೃತಕಾಲದ ನವನಾಗರಿಕರಿಗೆ ಅನುಗುಣ ದ ಉಪದೇಶವಲ್ಲವೆ ! ಇಂತಹ ವಿದ್ವಾಂಸರಿಗೆ ಪಂಚಾಂಗವನ್ನು ಮಾಡಲು ಬಹು ಸುಲಭಸಾಧ್ಯವಾಗಿರುತ್ತೆ. ಪಂಚಾಂಗವೇ ಪ್ರಮಾಣವೆಂದು ನಂಬಿದವರಿಗೆ ಪಂಚಾಂಗದಲ್ಲಿನ ಹೇಳಿಕೆಯಂತೆಯೇ ನಡೆದುಕೊಳ್ಳಬೇಕೆಂದು ಭರವಸೆಕೊಡುವಂತಿರಬೇಕು. ಹಾಗಿಲ್ಲದೆ ಪಂಚಾಂಗ ಬರೆಯುವ ಕಾಲದಲ್ಲಿ ತಿಳಿದು ಬಂದ ಅಂಶವನ್ನು ಪ್ರಚುರಿಸಿ ನಂತರ ಅದಕ್ಕೆ ವಿರೋಧವಾಗುವಂತೆ ಪುನಃ ಹಸ್ತಪತ್ರಗಳ ಮೂಲಕ ಅಭಿಪ್ರಾಯ ಪ್ರಚುರಪಡಿಸುವುದು ಸಮಂಜಸವಲ್ಲವು. ಗಣಿತ ಶಾಸ್ತ್ರವು ಸರ್ವರಿಗೂ ಒಂದೇ ಅಲ್ಲದೆ ಹೊತ್ತು ಹೊತ್ತಿಗೆ ಒಬ್ಬೊಬ್ಬರಿಗೆ ಒಂದೊಂದು ಮಾದರಿ ಉತ್ತರದಾಯಕವಲ್ಲವು. ತಮಗೆ ಅನುಮಾನಾಸ್ಪದವಾದ ಉತ್ತರ ದೊರೆತಲ್ಲಿ ಜ್ಯೋತಿಷವಿದ್ವಾಂಸರು ಒಟ್ಟುಗೂಡಿ ತಮ್ಮ ಸಾಧಕ ಬಾಧಕಗಳೊಂದಿಗೆ ಚರ್ಚಿಸಿ ಸರಿಪಡಿಸಿಕೊಂಡು ತದನಂತರ ತಮ್ಮ ಪಂಚಾಂಗಗಳನ್ನು ಪ್ರಚುರಪಡಿಸುವುದುಚಿತವೆಂದು ತೋರುತ್ತೆ. ವೃಥಾ ಪತ್ರಿಕೆಗಳಲ್ಲಿ ತಮ್ಮ ಚರ್ಚೆಗಳನ್ನು ತುಂಬಿಸಿದಲ್ಲಿ ಯಾವ ಉಪಯೋಗವೂ ಕಂಡು ಬರುವಂತಿಲ್ಲ. ಮುಖ್ಯ ಉದ್ದೇಶವು "ಏನಕೇನೋಪಾಯೇನ ಪ್ರಸಿದ್ಧಪುರುಷೋಭವ" ಎಂಬ ನಾಣ್ಣುಡಿಯಂತೆ ಭಾವಿಸಬೇಕಾಗುತ್ತೆ. 'ಲೋಕೋಭಿನ್ನರುಚಿಃ' ಎಂಬುದನ್ನು ಮೂಲಮಂತ್ರವಾಗಿಟ್ಟು ಪಂಚಾಂಗವನ್ನು ಪ್ರಕಟಿಸುವವರು ಜ್ಯೋತಿಷ ವಿದ್ವಾಂಸರೆನಿಸಿಕೊಳ್ಳುವುದಾದರೆ ಚಾಟುಶ್ಲೋಕಗಳನ್ನು ಬರೆಯುವುದರಲ್ಲಾಸಕ್ತಿಯುಳ್ಳವರು ಪಂಡಿತರಾಗಬಾರದೇಕೆ ? ಶಾಸ್ತ್ರವಿಶಾರದರು ಜನರೆಲ್ಲರೂ ತಮ್ಮಂತೆಯೇ ಪಂಡಿತರೆಂಬ ಭಾವನೆಯನ್ನು ಬಿಟ್ಟು ಅವರ ನಂಬುಗೆಗೆ ತಾವು ಪಾತ್ರರಾಗುವಂತೆ ವಿಷಯಗಳನ್ನು ಪ್ರಕಟಣೆಗೆ ಪೂರ್ವ ಚರ್ಚೆಯಿಂದ ನಿರ್ಧರಿಸಿ ಫಲಿತಾಂಶವನ್ನು ಹೊರಪಡಿಸಿ ಸರ್ವರ ಗೌರವಕ್ಕೂ ನಂಬುಗೆಗೂ ಪಾತ್ರರಾಗುವರೆಂದು ನಂಬಿರುವೆವು.

ಚಂದ್ರೋದಯವು ಸೂರ್ಯಾಸ್ತವಾದನಂತರವೆಂದು ನಿರ್ಧರಿಸಿ ಚಂದ್ರನೇ ಇಲ್ಲದಿರುವಾಗ ಗ್ರಹಣದ ದೃಶ್ಯಾದೃಶ್ಯವೆಂಬ ಚರ್ಚೆಯು ಆಭಾಸಕರವಲ್ಲವೆ ?

'ಕಪಿಂಖರಂವಾ ನಹಿವಚ್ಮಿ ಮಾನವಂ |
ಸ್ವಾಂತಂಹಿಧತ್ತೆ ಮುಕುರಂ ಸುನಿರ್ಮಲಂ ||'

' I no man call an ape or ass,
His own conscience holds him the glass. '
Pope.

……

ಕುರೂಪಿಯ ಗಂಡ ಕುರುಡ !

ಒಬ್ಬಾನೊಬ್ಬ ನ್ಯಾಯಶಾಸ್ತ್ರವಿಶಾರದನಿಗೆ ಅಮೌಲ್ಯ ಕುರೂಪಿರತ್ನ ಮಗಳಿದ್ದಳು ಮದುವೆಗೆ ಪ್ರಾಯ ಸಮರ್ಥಳಾಗಲು ಧನ ಕನಕ, ವಸ್ತ್ರ ವಾಹನ ಮುಂತಾಗಿ ಅಪರಿಮಿತ ಬಳುವಳಿಗೆ ಕೊಡುವದಾಗಿ ಎಷ್ಟು ಸಾರಿದರೂ ಕನ್ಯಾರ್ಥಿಗಳ್ಯಾರೂ ಬರಲಿಲ್ಲ. ಸರ್ವಾಭರಣಗಳಿಂದ ಎಷ್ಟು ಅಲಂಕಾರ ಮಾಡಿದರೂ ಅವಳ ವಿಕಾರವನ್ನು ಮರೆಮಾಡಲು ಸಾಧ್ಯವಾಗಿರಲಿಲ್ಲ. ಯಾರಿಗೂ ಬೇಕಿಲ್ಲದಿರಲು ಕಟ್ಟಕಡೆಗೆ ಒಬ್ಬ ಕುರುಡನಿಗೆ ಕೊಟ್ಟು ವಿವಾಹವಾಯಿತು. ಆಗ ಕುರುಡನಿಗೆ ಕಣ್ಣು ಕಾಣುವಂತೆ ಮಾಡವ ನೇತ್ರವೈದ್ಯನೊಬ್ಬನು ಅಲ್ಲಿಗೆ ಬರೋಣ, ಅಳಿಯನಿಗೆ ನೇತ್ರಚಿಕಿತ್ಸೆ ಮಾಡಿಸಕೂಡದೆ ಎಂದು ಕೇಳಿದ್ದಕ್ಕೆ ಕಣ್ಣು ಕಾಣಿಸಿ ಹೆಂಡತಿಯನ್ನು ನೋಡುವಂತಾದರೆ ಮುಂದೇನು ಗತಿ ! ಎಂದು ತಿಳಿಸಿ, ಕುರೂಪಿಯ ಗಂಡ ಕುರುಡನೇ ಆಗಿರಬೇಕು ಎಂದು ನ್ಯಾಯ ಹೇಳಿಬಿಟ್ಟನು.

ವೃತ್ತಾಂತ ಸಂಗ್ರಹ

—ಓಕ್ಲ ಹೋಮಾವಿನ ವೆಲ್'ಸ್ಟನ್ನಿನಲ್ಲಿ ೧೬ ವಷ
ಒಂದು ಹುಡುಗಿಯು ಸತ್ತುಹೋದಮೇಲೆ ಹೂಳ
ತೆಗೆದುಕೊಂಡುಹೋದರು. ಹೂಳುವ ಸಮಯದ
ತಾಯಿಯು ಮಗಳನ್ನು ನೋಡಲು ತುಂಬಾ ಆಶಿಸ
ಹೆಣದ ಪೆಟ್ಟಿಗೆಯ ಬಾಗಲನ್ನು ತೆರೆದರು. ಆಗ ಹು
ಗಿಯ ಹಣೆಯು ಬೆವರುತ್ತಿದ್ದಿತಲ್ಲದೆ ಹೃದಯದ
ಸ್ವಲ್ಪ ಚಲನೆಯೂ ಆಗುತ್ತಿದ್ದಿತು. ಹುಡುಗಿಯ
ಮನೆಗೆ ತಂದರು; ಸಂಪೂರ್ಣ ಗುಣವಾಗುವ ಭರ
ಇದೆಯಂತೆ. ಸತ್ತರೆಂದು ಕೂಡಲೇ ಆತುರದಿ
ಸುಡುವದೇ ಆಗಲಿ ಹೂಳುವದೇ ಆಗಲಿ ತಪ್ಪಲ್ಲವೇ

—ಅತಿವೃಷ್ಟಿಯ ದೆಸೆಯಿಂದ ಕಟಕ ಪ್ರಾಂತ್ಯದ ಅ
ಕ ಮನೆಗಳು ಬಿದ್ದುಹೋಗಿವೆ ; ಅನೇಕ ರಸ್ತೆಗಳೆಲ
ಜಲಮಯವಾಗಿದೆ.

—ಅಮೇರಿಕಾ ಖಂಡದಲ್ಲಿ ಲಾಸ್'ಅಂಜ್'ಲಾಸ್
ಒ ಪ್ರಾಂತ್ಯದಲ್ಲಿ ಭೂಕಂಪ ಉಂಟಾಗಿ ಲಕ್ಷಾವ
ರೂಪಾಯಿಗಳ ಲುಕ್ಸಾನಾಗಿ ಸಾವಿರಾರು ಮನೆಗ
ಮುರಿದುಬಿದ್ದವು.

—ಪೋಲೆಂಡು ಬಳಿ ಮಹಾಪುರದಲ್ಲಿ ಪ್ರಳಯವಾ
ರಸ್ತೆ ಮನೆ ಸೇತುವೆಗಳು ಕೊಚ್ಚಿಹೋದವು ; ಒಂ
ಕೋಟಿ ಪೌಂಡಿನಷ್ಟು ನಷ್ಟವಾಯಿತು. ಒಂದೂ
ಲಕ್ಷ ಜನರು ನಿರಾಶ್ರಿತರಾದರು.

—ಕಲ್ಕತ್ತಾದಲ್ಲಿ ಈಚೆಗೆ ಅಲ್ಲಲ್ಲೆ ಉರ್ದು ಭಾ
ಪ್ರಕಟಣೆ ಪತ್ರಗಳು ಗೋಡೆಗಳ ಮೇಲೆ ಅಂಟಿಸಿದ್ದ
ದೂ ಅದರಲ್ಲಿ—ಮಹಮುದೀಯರೆಲ್ಲರೂ ಮೀಟಿ
ನಡೆಸಿ ತಮ್ಮ ಕಣ್ಣಿಗೆ ಗೋಚರವಾಗುವ ಸ್ಥಳಗ
ಹಿಂದೂ ವಿಗ್ರಹಗಳು ಕಾಣದಂತೆ ಸರ್ಕಾರದನ
ಮಾಡಬೇಕೆಂತ ಪ್ರಾರ್ಥಿಸಬೇಕೆಂದೂ, ಮಹಮ್ಮದೀ
ರು ಹಿಂದೂ ವಿಗ್ರಹಗಳನ್ನು ಒಡೆದುಹಾಕದಿದ್ದರೆ ಷ
ಮುಕ್ತರಾಗುವರೆಂದೂ; ಬರೆದಿರುವದಲ್ಲದೆ, ಗ
ಮುಂತಾದ ಪ್ರಮುಖರ ಮೇಲೂ ದೂಷಾರೋ
ಗಳಿವೆಯೆಂದೂ ತಿಳಿಯಬಂದಿದೆ.

—ಕೋರಿಯಾ ದೇಶದ ರಾಕೂಟ ನದಿಗೆ ಪೂರ್ಣ
ವಾಹ ಬಂದು ೩೦೦೦ ಜನರು ನೀರಿನಪಾಲಾದರ

—ಮದ್ರಾಸಿನಲ್ಲಿ ಒಬ್ಬ ಕಳ್ಳನು ಒಂದು ಹುಡುಗಿ
ಹಾಕಿಕೊಂಡಿದ್ದ ಚಿನ್ನದ ಸರವನ್ನು ಕಿತ್ತುಕೊಳ್ಳ
ಪೋಲೀಸಿನವರು ಅವನನ್ನು ಹಿಡಿದುಕೊಂಡರು. ಕೂ
ಲೇ ಸರವನ್ನು ನುಂಗಿಬಿಟ್ಟನು. ಆಸ್ಪತ್ರೆಯಲ್ಲಿ ಎಕ್ಸ
ಮೂಲಕ ನೋಡಲು ಅವನ ಹೊಟ್ಟೆಯಲ್ಲಿ ಚಿನ್ನದ
ವಲ್ಲದೆ ಆನೆಯಾಕಾರದ ಪದಾರ್ಥವೊಂದು ಇರುವ
ಯೂ ಕಂಡುಬಂದಿದೆಯಂತೆ !

—ಮೈಸೂರಿನ ಎಲ್ಲಾ ಮೊಹಲ್ಲಾಗಳಲ್ಲಿಯೂ ದು
ರಿ ಕಂದಾಯಗಳನ್ನು ಮುನಿಸಿಪಾಲಿಟಿಯವರು ದಾ
ಲ್ಮಾಡಿರುವ ವಿಷಯವನ್ನು ಯೋಚಿಸುವದಕ್ಕಾಗಿ ರಾ
ಧಾನಿಯ ಕೆಲ ಪ್ರಮುಖರಾದ ವೋಟರುಗಳು ೨೬
ತಾರೀಖಿನ ದಿವಸ ಸುಬ್ಬಾರಾಯನ ಕೆರೆ ಅಂಗಳದಲ್ಲಿ ಸ
ನಡೆಸಿ, ಠರಾವುಗಳನ್ನು ಮಂಜೂರ್ಮಾಡಿ ಅವುಗಳನ
ಶ್ರೀಮನ್ಮಹಾರಾಜರವರಿಗೂ, ಅವರ ಸರ್ಕಾರಕ
ಮುನಿಸಿಪಲ್ ಪ್ರೆಸಿಡೆಂಟರಿಗೂ ಕಳುಹಿಸುವಂತೆ
ರ್ಮಾನವಾಯಿತೆಂದು ತಿಳಿಯಬಂದಿದೆ.

—ಇಂಗ್ಲೆಂಡಿನಲ್ಲಿ ಒಂದು ವಿಜಾತಿಯವಾದ ವಿವಾ
ನಡೆದಿದೆ. ಗಂಡಿಗೆ ೧೨೦ ವರ್ಷ, ಹೆಣ್ಣಿಗೆ ೮೦ ವಷ

—ಲಾಹೋರು ಮುನಿಸಿಪಾಲಿಟಿಯವರು ಅಲ್ಲಿ
ಎಲೆಕ್ಟ್ರಿಕ್ ಕಂಪೆನಿಯವರಿಗೆ ಬೀದಿಗಳ ದೀಪದಬಾ
೬೨೦೦೦ ರೂಪಾಯಿಗಳನ್ನು ಬಾಕಿ ಕೊಡಬೇಕಾ
ರುವುದೆಂದೂ, ಕಂಪೆನಿಯವರು ನೋಟೀಸುಕೊಟ್ಟ
ಪಾವತೀಮಾಡಿಲ್ಲವೆಂತಲೂ ಅದಕ್ಕಾಗಿ ರಸ್ತೆಗಳ
ದೀಪನಿಲ್ಲಿಸಲಾಗುವುದೆಂದೂ ತಿಳಿಯಬಂದಿದೆ.

—ಬಾವ್ಲಾ ಖೂನಿ ಮೊಖದ್ದಮೆಯಲ್ಲಿ ಮುಖ
ಳಾದ ಮುಂತಾಜ್ ಬೇಗಮ್ಮಳು ಒಂದು ಮಗುವ
ಕಳೆದವಾರ ಹೆತ್ತಳು.

ಪತ್ರಸಂವಾದ

ಉಪಲೇಖಕರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

ಚಂದ್ರಗ್ರಹಣ

೪—೮—೨೫ ನೆ ಮಂಗಳವಾರ (ಈ ಶ್ರಾವಣ ಕ್ಲ ಪೂರ್ಣಿಮಾ) ದ ದಿವಸ ಸಾಯಂಕಾಲ ಸಂಭ ಸಬಹುದಾದ ಚಂದ್ರಗ್ರಹಣದವಿಷಯದಲ್ಲಿ ಜ್ಯೋತಿ ಷ್ಕರು ತಮ್ಮ ತಮ್ಮ ಪಂಚಾಂಗಗಳಲ್ಲಿ ಭಿನ್ನಾಭಿಪ್ರಾ ಯ ಪಟ್ಟು ಇರುವರು. ಪಂಚಾಂಗವನ್ನೇ ಪ್ರಮಾಣ ನ್ನಾಗಿ ನಂಬಿದವರಿಗೆ ಈ ಭಿನ್ನಾಭಿಪ್ರಾಯವು ಅನು ಮಾನವನ್ನುಂಟುಮಾಡಲು ಕಾರಣವಾಗಿರುತ್ತೆ. ಈ ನುಮಾನ ಪರಿಚ್ಛೇದ ಮಾಡುವುದು ಜೋಯಿಸರ ರ್ತವ್ಯವಾದ್ದರಿಂದ ಈ ಗ್ರಹಣದ ವಿಚಾರವನ್ನು ಹುವಾಗಿ ಆಧಾರಗಳಿಂದ ಶೋಧಿಸಿ ತಿಳಿದುಬಂದ ಂಶವನ್ನು ಪ್ರಚುರಪಡಿಸಿರುವೆನು.

ಕೆಲವರು ಈ ಗ್ರಹಣವು ದೃಷ್ಟಿಗೆ ಗೋಚರವಾಗ ದ್ದರೂ ಶಾಸ್ತ್ರತಃ ದೃಷ್ಟವಾದುದೆಂದು ಗ್ರಹಣ ಯುಕ್ತವಾದ ಆಚರಣೆಯನ್ನು ಮಾಡಬೇಕೆಂತಲೂ ತ್ತೆ ಕೆಲವರು ನಮ್ಮ ದೇಶಕ್ಕೆ ಶಾಸ್ತ್ರತಃ ಕೂಡ ಣಿಸುವದಿಲ್ಲವಾದ ಕಾರಣ ಗ್ರಹಣಾಚರಣೆಮಾಡ ಕಾಗಿಲ್ಲವೆಂತಲೂ ತಮ್ಮ ತಮ್ಮ ಪಂಚಾಂಗಗಳ ಮೂಲಕ ತಿಳಿಯಪಡಿಸಿರುತ್ತಾರೆ. ಯಾರ ಹೇಳಿಕೆ ಂತೆ ನಡೆದುಕೊಳ್ಳಬೇಕೆಂದು ಯೋಚಿಸುತ್ತಿರು ಲ್ಲಿ ಅದೇ ದಿವಸವೇ ಉಪಾಕರ್ಮವೂ ಬಂದೊದಗಿ ವುದರಿಂದ ಅನೇಕರಿಗೆ ಹೇಗೆ ನಡೆದುಕೊಳ್ಳಬೇಕೆಂ ತೋಚದೆ ಅವರು ಪೇಚಾಟದಿಂದ ತಲ್ಲಣಿಸುತ್ತಿ ವರು. ಆಸ್ತಿಕಾಭಿಮಾನಿಗಳು ಸಾವಧಾನದಿಂದ ಲ್ಪ ವಿಮರ್ಶೆಮಾಡಿಕೊಂಡರೆ ಅವರಿಗೇ ಈ ಅನು ಮಾನ ಪರಿಚ್ಛೇದವಾಗುವುದು. ಹೇಗೆಂದರೆ:—ಆ ಸ ಗ್ರಹಣವೇನೋ ಸಹಜ. ಆದರೆ ಗ್ರಹಣಮೋಕ್ಷ ಕಾಲವು ಸಾಯಂಕಾಲ ಘಂಟೆ ೬-೪೮ಕ್ಕೆಂದು ಬಹು ಂಚಾಂಗ ಸಮ್ಮತವಾಗಿದೆ. ಈ ಕಾಲವು ಏಕವಾ ನಿಂದ ಅನೇಕ ಜೋಯ್ಸರು ಹೇಳಿರುವುದರಿಂದ ಕಾಲವೇ ಸರಿಯಾದ್ದೆಂದು ಒಪ್ಪತಕ್ಕದ್ದಾಗಿರುತ್ತೆ. ದುದರಿಂದ ಚಂದ್ರಗ್ರಹಣ ಮೋಕ್ಷಕಾಲವು ಘಂಟೆ -೪೮ಕ್ಕೆಂದು ಇತ್ಯರ್ಥವಾಗಿರುತ್ತೆ.

ಆದರೆ ಚಂದ್ರೋದಯ ಸೂರ್ಯಾಸ್ತಮಯಕಾಲಗಳ ತ್ಯಾಸದಿಂದ ಗ್ರಹಣ ಕೆಲವುಕಡೆ ಕಾಣಿಸತಕ್ಕದ್ದೂ ಲವು ಕಡೆ ಕಾಣಿಸದಿರತಕ್ಕದ್ದೂ ಉಂಟು. ನಮ್ಮ ಮೈಸೂರು ಸಂಸ್ಥಾನದಲ್ಲಿ ಸೂರ್ಯಾಸ್ತಮವೂ ಕೂಡ ಂಟೆ ೬-೪೮ಕ್ಕೇನೆ ಆಗುತ್ತದೆಂದು ಗಣಿತದಿಂದ ಂಡುಹಿಡಿಯಲ್ಪಟ್ಟಿದೆ—ಇದು ಹೇಗಂದರೆ—೪-೮-೨೫ ಲ್ಲಿ ಮದರಾಸಿನಲ್ಲಿ ಘಂಟೆ ೬-೩೪ಕ್ಕೆ ಸೂರ್ಯಾಸ್ತ ಗುವುದೆಂದು ಮದರಾಸು ಮತ್ತು ಇತರ ಪಂ ಾಂಗಗಳಲ್ಲಿ ಗಣಿತ ನಿಷ್ಕರ್ಷೆಯಿಂದ ತಿಳಿಸುತ್ತಾರೆ. ದನ್ನು ಮದರಾಸು ಪತ್ರಿಕಾಕಾರರೂ ಅನುಮೋ ಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಆದುದ ಂದ ಇದಕ್ಕೆ ಸಂಶಯವಿಲ್ಲ. ಮದರಾಸಿಗೆ ಮೈಸೂರು ಡಿಗ್ರಿ ಪಶ್ಚಿಮದಲ್ಲಿದ್ದು ಅಲ್ಲಿಂದಿಲ್ಲಿಗೆ ಕಾಲದಲ್ಲಿ ೪ ನಿಮಿಷಗಳು ಹೆಚ್ಚುವುದರಿಂದ ಅಲ್ಲಿನ ಟೈಮಿಗೆ ಲ್ಲಿನ ಟೈಮು ಸರಿಯಾಗಬೇಕಾದರೆ ೧೪ ನಿಮಿಷ

ತಿಳಿದಂಶವಾಗಿರುತ್ತೆ. ಆದುದರಿಂದ ಮೇಲೆ ಹೇಳಿದಂತೆ ಮೈಸೂರಿನಲ್ಲಿ ಸೂರ್ಯಾಸ್ತವು ಘಂಟೆ ೬-೪೮ಕ್ಕೇನೆ ಎಂದು ಘಂಟಾಘೋಷವಾಗಿ ಹೇಳಬಹುದು. ಆ ದಿವಸವೇ ೬-೪೮ಕ್ಕೇ ಗ್ರಹಣ ಮೋಕ್ಷಕಾಲವಾದುದರಿಂದ ಸೂರ್ಯಾಸ್ತಮಯವೂ ಗ್ರಹಣ ಮೋಕ್ಷಕಾಲವೂ ಏಕಕಾಲವಾಗಿ ಪರಿಣಮಿಸಿ ನಮಗೆ ಗ್ರಹಣವು ದೃಷ್ಟಿಗೆ ಗೋಚರವಾಗುವುದಿಲ್ಲ. ಅಲ್ಲದೆ ಬಹುಮತ ರೀತ್ಯಾ ಚಂದ್ರೋದಯವು ಸೂರ್ಯಾಸ್ತವಾದ ನಂತರವೆಂದು ಸ್ಪಷ್ಟಪಡಿಸಿರುವುದರಿಂದ ನಮಗೆ ಚಂದ್ರಗ್ರಹಣವಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಆದುದರಿಂದ ಈ ವಿಷಯದಲ್ಲಿ ಯಾವ ಅನುಮಾನವೂ ಯಾರೂ ಪಡಬೇಕಾದುದಿಲ್ಲ. ಮತ್ತು ತತ್ಪ್ರಯುಕ್ತ ಗ್ರಹಣಾಚರಣೆಗೆ ಕಾರಣವೂ ಇಲ್ಲ.

ಅಯ್ಯಾ ಎಡಿಟರವರೇ ! ಈ ನನ್ನ ಅಭಿಪ್ರಾಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ. ಇದನ್ನು ಯಾರಾದರೂ ಖಂಡಿಸುವುದಾದರೆ ಸಕಾರಣವಾದ ಆಧಾರಗಳಿಂದ ಅವರಿಗೆ ಸಮಾಧಾನವನ್ನು ಕೊಡುವೆನು.

ಯಚ್ಚಾರ್ ಸಂಪತ್ಕೃಷ್ಣ ಜೋಯ್ಸರು.
ಆಸ್ಥಾನ ಜ್ಯೋತಿಷ ವಿದ್ವಾನ್, ಮೈಸೂರು.

ನೇತ್ರೇಂದ್ರಿಯದ ಫಲಾಫಲಗಳು ಮತ್ತು ನೇತ್ರವನ್ನು ಕಾಪಾಡಿಕೊಳ್ಳುವ ಮಾರ್ಗಗಳು.

೧ ಮಾನವನಿಗಿರುವ ಪಂಚೇಂದ್ರಿಯವೇ ಸರ್ವಶ್ರೇಷ್ಠವು. ಕಣ್ಣಿಲ್ಲದವನಿಗೆ ಈ ಪ್ರಪಂಚದ ಸ್ಥಿಗಳೇ ಅವನ ಭಾವಕ್ಕೆ ಶೂನ್ಯವು. ಸಮಸ್ತ ವಸ್ತುಗಳ ಗುಣಮಹಿಮೆಗಳನ್ನು ತಿಳಿದುಕೊಳ್ಳುವುದಕ್ಕೂ, ಮತ್ತೊಬ್ಬನು ನಡೆಸುತ್ತಿರುವ ಅಮೋಘವಾದ ಕಾರ್ಯಗಳನ್ನು ನೋಡಿ ತಿಳಿದು ಅನುಕರಿಸಬೇಕೆಂಬ ಪ್ರಯತ್ನಕ್ಕೂ ಜ್ಞಾನವನ್ನಾರ್ಜಿಸುವುದಕ್ಕೂ ನೇತ್ರೇಂದ್ರಿಯವೇ ಸಾಧನವು.

೨ ನೇತ್ರಹೀನನಾದ ಮಾನವನ ಮುಖದ ವರ್ಚಸ್ಸೇ ಕಡಿಮೆಯಾಗಿ ಗೆಲವು ತೋರದೆ ಅವನು ಮಂಕಾಗಿ ಕಾಣಬರುವನು. ಮಾತನಾಡುವುದಕ್ಕೆ ಬರುವವನ ಮನಸ್ಸಿನಲ್ಲಿರುವ ವಿಷಯಗಳು ಸುಲಭವಾಗಿ ಹೊರಬೀಳದೆ ಹೋಗುವುವು. ಅಲ್ಲದೆ ಪ್ರಪಂಚಕ್ಕೂ ತನಗೂ ಯಾವ ಸಂಬಂಧವಿರುವುದೆಂಬುದೇ ಮನಸ್ಸಿಗೆ ತಂದುಕೊಳ್ಳಲಾರದೆ ವ್ಯಸನಮುಖಿಯಾಗಿದ್ದು ಕಾಲಕಳೆಯಬೇಕಾಗಿ ಬರುವುದನ್ನು ಎಲ್ಲರೂ ನೋಡಿರುವವರಾಗಿದ್ದಾರೆ.

೩ ಹುಟ್ಟುಕುರುಡನಾದವನು ನೇತ್ರಗಳ ಸಹಾಯದಿಂದ ಪಡೆದ ಅನುಭವಶಾಲಿಯಷ್ಟು ಜ್ಞಾನಪಡೆಯಬಹುದು. ಇಂತಹವರಿಗೆ ಕೈಬೆರಳೇ ನೇತ್ರಕ್ಕೆ ಪ್ರತಿಯಾಗಿ ಅನುಕೂಲಿಸುವುದು. ನಾವು ನೇತ್ರದಿಂದ ನೋಡಿ ವಿಷಯಗ್ರಹಣವನ್ನು ಹೇಗೆ ಮಾಡುವೆವೋ ಹಾಗೆಯೇ ಕುರುಡನು ತನ್ನ ಬೆರಳುಗಳಿಂದ ಮುಟ್ಟಿನೋಡಿ ತಿಳಿಯುವ ಸ್ಪರ್ಶೇಂದ್ರಿಯ ಶಕ್ತಿಯಿಂದ ತಿಳಿಯುತ್ತಾನೆ. ಹೇಗೆಂದರೆ:—ನಮ್ಮ ಶರೀರದಿಂದ ಶಕ್ತಿಗಳು ಹೊರಗೆ ಪ್ರವಹಿಸುತ್ತಿರುವುವು. ಕಣ್ಣಿನ ಶಕ್ತಿಯು ಕುಡ್ಡಾಂಗವಾಗಿ ನಿಂತುಹೋದರೆ ಇತರ ಶಕ್ತಿಗಳೇ ತಮ್ಮ ತಮ್ಮ ಭಾಗಗಳಲ್ಲಿ ಹೆಚ್ಚು ಹೆಚ್ಚಾದ ಕೆಲಸಗಳನ್ನು ಮಾಡುತ್ತವೆ.

೪ ಈ ಕಾರಣದಿಂದಲೇ ಸ್ಪರ್ಶೇಂದ್ರಿಯ ಮೊ

ಕುರುಡನಲ್ಲಿ ಹೆಚ್ಚಾಗಿರುತ್ತವೆ. ಅವರು ಮುಟ್ಟಿನೋಡಿದ ವಸ್ತುಗಳ ನಿಜಾಕೃತಿಯ ಭಾಗಗಳನ್ನು ತಿಳಿಯಲು ಸಾಧ್ಯವಾಗಿರುವುದೆಂದು ಧಾರಾಳವಾಗಿ ನಾವು ಹೇಳಬಹುದು. ಇಂತಹ ಸ್ಪರ್ಶೇಂದ್ರಿಯದ ಶಕ್ತಿ ಮೂಲಕವಾಗಿ ತಿಳಿಯುವಂತೆ ಉಬ್ಬಾದ ಚುಕ್ಕೆಗಳುಳ್ಳ ಅಕ್ಷರಗಳಿಂದ ಇತರ ಹುಡುಗರಿಗೆ ಹೇಳುವ ವಿದ್ಯೆಗಳನ್ನೆಲ್ಲಾ ಅವರಿಗೆ ಹೇಳಿಕೊಟ್ಟು ಬಿ. ಎ. ಎಂ. ಎ. ಮುಂತಾದ ಪರೀಕ್ಷೆಗಳನ್ನು ನಾವು ಮಾಡಿಸಬಹುದಾಗಿದೆ.

೫ ನೇತ್ರಗಳಿರತಕ್ಕವರು ತಮ್ಮ ಅಶ್ರದ್ಧೆ ಮತ್ತು ಅಜ್ಞತೆಗಳಿಂದ ನೇತ್ರಪಾಟವವನ್ನು ಕಡಿಮೆಮಾಡಿಕೊಳ್ಳದಂತೆ ಕೆಳಗೆ ಉದಹರಿಸಿರುವ ನಿಯಮಗಳನ್ನು ಕೈಕೊಂಡು ನಡೆದರೆ ಒಳ್ಳೆಯದೆಂದು ಶಾಸ್ತ್ರಜ್ಞರು ಹೇಳಿರುವರು. ಆ ನಿಯಮಗಳಾವುವೆಂದರೆ:—

೧ ಮಾನವನ ಜೀವಿತಕಾಲವೆಲ್ಲಾ ನೇತ್ರೇಂದ್ರಿಯದಿಂದಲೇ ಶರೀರ ಸೌಖ್ಯವು ಪ್ರಾದುರ್ಭಾವಕ್ಕೆ ಬರಬೇಕಾಗಿರುವುದರಿಂದ ಆಯಾ ಇಂದ್ರಿಯ ವಿಷಯದಲ್ಲಿ ತುಂಬ ಪರಾಂಬರಿಕೆಯನ್ನು ಪ್ರತಿಯೊಬ್ಬನೂ ಎಷ್ಟು ವಹಿಸಿದರೂ ಅಷ್ಟು ಒಳ್ಳೆಯದು.

೨ ಓದುತ್ತಿರುವಾಗ ತಲೆಯನ್ನು ಮೇಲ್ಭಾಗಕ್ಕೆ ಎತ್ತಿಕೊಂಡೇ ಓದಬೇಕು.

೩ ಓದುತ್ತಿರುವಾಗ್ಗೆ ಪುಸ್ತಕವನ್ನು ಮುಖದಿಂದ ಹದಿನಾಲ್ಕು ಅಂಗುಲ ದೂರದಲ್ಲಿ ಹಿಡಿದುಕೊಳ್ಳಬೇಕು.

೪ ಬೆಳಕು ಚೆನ್ನಾಗಿರುವಂತೆ ಮಾಡಿಕೊಂಡು ಓದಬೇಕು.

೫ ನಸು ಬೆಳಕಿರುವಾಗ ಓದಬಾರದು. ಗಾಡಿಯಲ್ಲಿ ಕುಳಿತು ಸವಾರಿ ಹೊ [illegible] ವಾಗಲೂ ಒರಗಿ ಮಲಗಿಕೆ [illegible] ಗಲೂ ಓದಬಾರದು. ಇದರಿಂ [illegible] ಕೆಡಕಾಗುವುದು.

೬ ಹಗಲಿನಲ್ಲಿ ಸೂರ್ಯನಕಾಂತಿಯು [illegible] ವಾಗಿ ಪುಸ್ತಕದಮೇಲೆ ಬೀಳುತ್ತಿರ [illegible] ಅವಕಾಶ ಕೊಟ್ಟುಕೊಂಡು ಓದಬಾರ

೭ ದೀಪವನ್ನು ಮುಖದ ಮುಂಭಾಗದಲ್ಲಿ ಟ್ಟುಕೊಂಡು ಓದಬಾರದು.

೮ ಬೆಳಕು ಹಿಂಭಾಗದಿಂದಾಗಲೀ ಅಥವಾ ಎಡಭಾಗದಿಂದಾಗಲಿ ಪುಸ್ತಕದಮೇಲೆ ಬೀಳುತ್ತಿರುವಂತೆ ಮಾಡಿಕೊಂಡು ಓದಬೇಕು.

೯ ಚೆನ್ನಾಗಿ ಛಾಪೆಯಾಗದ ಸಣ್ಣನಾಗಿರುವ ಅಕ್ಷರಗಳುಳ್ಳ ಪುಸ್ತಕಗಳನ್ನು ಓದಬಾರದು.

೧೦ ಬಹಳ ಕಾಲ ಓದಿ ನೇತ್ರಗಳಿಗೆ ಆಯಾಸ ಕೊಡದಂತಿದ್ದು ಮಧ್ಯೆ ಮಧ್ಯೆ ತನ್ನ ದೃಷ್ಟಿಯನ್ನು ಬೇರೆಕಡೆ ತಿರುಗಿಸುವಂತೆ ಮಾಡಿಕೊಂಡು ಓದಬೇಕು.

೧೧ ಪ್ರಾತಃಕಾಲ ಮತ್ತು ರಾತ್ರಿಕಾಲಗಳಲ್ಲಿ ನೇತ್ರಗಳನ್ನು ನಿರ್ಮಲವಾಗಿ ನೀರಿನಿಂದ ತೊಳೆಯುತ್ತಿರಬೇಕು.

೧೨ ಕಣ್ಣುಗಳು ನವೆದಾಗ್ಗೆ ಬರಿಗೈಯಿಂದಲಾಗಲೀ ಅಶುಚಿ ವಸ್ತ್ರದಿಂದಾಗಲೀ ಎಂದಿಗೂ ಉಜ್ಜಬಾರದು.

ಮೇಲೆ ಹೇಳಿದ ನಿಯಮಗಳು ಮುಖ್ಯವಾ [illegible] ಇದರಂತೆಯೇ ಖಂಡಿತವಾಗಿ ನಡೆಯಬೇಕ [illegible] ನೆನಪಿಟ್ಟುಕೊಂಡಿರದೆ ಅನಾದರಣೆಯಿಂದಿದ್ [illegible] ಅದರ ಫಲಗಳನ್ನು ಅನುಭವಿಸಿಯೇ ತೀ

Mysore Government Advertisements.

ಮೈಸೂರು ರೈಲ್ವೆಗಳು

ಪ್ರಸಿದ್ಧ ಪತ್ರಿಕೆ

ಮೈಸೂರು ರೈಲ್ವೆ ವರ್ಕಷಾಪುಗಳಲ್ಲಿ ಮೌಲ್ಡರುಗಳೂ, ಬಾಯಿಲರ್ ಮೇಕರುಗಳೂ, ಇಞ್ಜನ್ ಫಿಟರುಗಳೂ, ಮತ್ತು ರಿವಿಟರುಗಳೂ ಕೆಲಸಕ್ಕೆ ಬೇಕಾಗಿದೆ.

ಇಣ್ಡಿಯನ್ ರೈಲ್ವೆ ವರ್ಕಷಾಪುಗಳ ಸಂಪೂರ್ಣಾನುಭವವುಳ್ಳ ಜನರು ಮಾತ್ರವೇ ಸದರಿ ಕೆಲಸಗಳಿಗಾಗಿ—

ಲೋಕೋ ಮತ್ತು ಕ್ಯಾರಿಯೇಜ್
ಸೂಪರಿಣ್ಟೆಣ್ಡೆಣ್ಟ್
ಮೈಸೂರು ರೈಲ್ವೆಗಳು
ಮೈಸೂರು.

ಎಂಬ ವಿಳಾಸಕ್ಕೆ ಅರ್ಜಿಯನ್ನು ಬರೆದುಕೊಳ್ಳಬಹುದಾಗಿದೆ.

MYSORE GOVERNMENT LOAN BONDS & Shares of Companies

BOUGHT & SOLD

For particulars apply to:—

**THE SEMAH ELISHA COMPANY
MYSORE.**

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿರುತ್ತೆ ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆಯಿಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು

**The Champion Metropolitan College
Commerce, Economics, Banking, etc.**

YELWAL ROAD, MYSORE.

26 Prospectus can be had free at the e or by post on receipt of ½ anna stamp r postage (5-6)

To Popularise your Business
in the Karnataka Provinces

YOU MUST ADVERTISE IN

the "SATYAVADI"

It is the cheapest and mostup-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

FOR RATES ETC., APPLY TO
**The SATYAVADI Office,
Mysore, S. India.**

ಹನುಮಾನ್ ಉಪಾಸಕರ

ಆಶ್ಚರ್ಯಕರವಾದ ಭವಿಷ್ಯದ್ವಾಕ್ಯಗಳು

ಚನಾಯಿಸಿ ನಿಮ್ಮ ಪ್ರಶ್ನೆಗಳನ್ನು ಚೆನ್ನಾಗಿ ಭದ್ರಪಡಿಸಿ ಮೊಹರುಮಾಡಿದ ಕವರಿನಲ್ಲಿ ಇಟ್ಟು ಕಳುಹಿಸಿ ಆ ಪ್ರಶ್ನೆಗಳಿಗೆ ತಕ್ಕ ಉತ್ತರಗಳೂ ಮತ್ತು ಬಿಚ್ಚಲ್ಪಡದೆ ಇರುವ ನಿಮ್ಮ ಕವರೂ ಕಳುಹಿಸಲ್ಪಡುವುದು. ಸರಿಯಾದ ನಿಮ್ಮ ಜನನಕಾಲವನ್ನೂ ಮತ್ತು ದಿನವನ್ನೂ ಅಥವ ಕಾಗದ ಬರೆಯುವ ಕಾಲವನ್ನೂ ಬರೆದು ಕಳುಹಿಸಿ, ಕಳ್ಳತನ ಮತ್ತು ಸರ್ಕಾರಿ ಸಂಬಂಧವಾದ ಪ್ರಶ್ನೆಗಳಿಗೆ ಗಮನ ಕೊಡುವುದಿಲ್ಲ. ಪರೀಕ್ಷಾರ್ಥವಾದ ಪ್ರಶ್ನೆಗಳಿಗೆ ಉತ್ತರ ಕೊಡಲಾಗುವುದಿಲ್ಲ. ಗ್ರಹಗಳ ದುಶ್ಚೇಷ್ಟೆಗಳನ್ನು ಶಾಸ್ತ್ರೀಯವಾದ ಶಾಂತಿ, ಹೋಮ, ಜಪ ಮತ್ತು ಕವಚ ಇವುಗಳ ಮೂಲಕ ಪರಿಹಾರಮಾಡುವ ಕ್ರಮವನ್ನು ತಿಳಿಸುತ್ತೇವೆ. 30-7

ದರಗಳು.—೫ ಪ್ರಶ್ನೆಗಳಿಗೆ ೧ ರೂಪಾಯಿ. ೫ರ ಮೇಲೆ ಪ್ರತಿ ಪ್ರಶ್ನೆಗೂ ೮ ಆಣೆ. ೧ ವರ್ಷದ ಜನ್ಮಫಲಗಳನ್ನು ಶೋಧಿಸಿ ಬರೆದು ತಿಳಿಸುವದಕ್ಕೆ ೫ ರೂ. ಬೆಳ್ಳಿ ಹನುಮಾನ್ ಕವಚ ೧ ಕ್ಕೆ ರೂ ೩—೮—೦ (ಬೇರೆ ದೇಶಗಳಿಗೆ ಅದಕ್ಕೆ ದ್ವಿಗುಣ) ವಿ.ಪಿ. ಚಾರ್ಜು ಹೆಚ್ಚು ಕೊಡಬೇಕು.

— ಅಭಿಪ್ರಾಯಗಳು —

ವಿ. ಪಿ. ಮೂಲಕ ಒಂದು ಹನುಮಂತ ಕವಚವನ್ನು ದಯವಿಟ್ಟು ಕಳುಹಿಸಿ. ನನ್ನ ೫ ಪ್ರಶ್ನೆಗಳಿಗೆ ತಾವು ಕೊಟ್ಟ ಉತ್ತರಗಳಿಂದ ನಾನು ತೃಪ್ತಿಪಟ್ಟಿರುವೆನು. ಮತ್ತು ಸ್ವಪ್ನದಲ್ಲಿಯೂ ಹನುಮಂತ ದೇವರನ್ನು ನೆನ್ನೆ ರಾತ್ರಿ ಕಂಡೆನು. ಥಾನೇಶ್ವರ ವಾಜೀರಾನ್
ಜಗ್ಗೀವನ್ ದಯಾಲ್ ಒಂಗಲೆ, ಫಾಟ್ ಕೂಪರ್,

ನಿಮ್ಮ ನಂ. ೧೧೫೨ ತಾ|| ೧೭-೧-೨೩ ರ ಕಾಗದದಲ್ಲಿ ಸೂಚಿಸಿದ್ದಂತೆ ಮಾರ್ಕಾಪುರದಿಂದ ಕೊಯಿಲ್ ಕುಂಡಕ್ಕೆ ನನಗೆ ವರ್ಗವಾಯಿತು. ನನಗೆ ಒಂದು ಹನುಮಂತ ಕವಚವನ್ನು ದಯವಿಟ್ಟು ವಿ. ಪಿ. ಮೂಲಕ ಕಳುಹಿಸಿಕೊಡಿ. ಸಿ. ದೊರಸಾಮಿನಾಯುಡು
೫-೨-೨೩ ಪೋಲೀಸ್ ಸರ್ಕಲ್ ಇನ್ಸ್ಪೆಕ್ಟರ್
ಕೊಯಿಲ್ ಕುಂಡ, ಕರ್ನೂಲ್ ಡಿಸ್ಟ್ರಿಕ್ಟ್

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ಇರಬೇಕು.

Proprietor **Malayala Mantrashala**
VILLAPURAM Post (S. I. Ry)

THE MYSORE PRESS

RAMAVILAS ROAD
MYSORE

We undertake to print

JOBS — BOOKS & PERIODICALS

Neat Workmanship
Moderate Charges
Prompt Execution

Colour & artistic wor a speciality

Trial order solicited

**B. S. MURTHY, B. A
Proprietor.**

ಮೈಸೂರ್ ಪ್ರೆಸ್

ರಾಮವಿಳಾಸ ಅಗ್ರಹಾರ
ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ!!!

ಬಿ. ಎಸ್. ಮೂರ್ತಿ, ಬಿ.
ಪ್ರೊಪ್ರೈಟರ್.

Printed and Published by B.S.Murthy, at the Mysore Press, Mysore, for the Ed and Proprietor.